ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 03/07/2019

### ಜಾಧವ್ ಮಾದರಿ ಅನುಸರಿಸಲು ವಿಧಾನ ಸಭಾಧ್ಯಕ್ಷ ರಮೇಶ್ ಕುಮಾರ್ ನಿರ್ಧಾರ

# ರಾಜೀನಾಮೆ ಅಂಗೀಕಾರ ವಿಳಂಬ ಸಾಧ್ಯತೆ

**ವಿಕ ಸುದ್ದಿಲೋಕ** ಬೆಂಗಳೂರು 3/7/19

ಡಾ.ಉಮೇಶ್ ಜಾಧವ್ ರಾಜೀನಾಮೆ ಪ್ರಕರಣದ ಮಾದರಿಯಲ್ಲೆ ಆನಂದ್ ಸಿಂಗ್ ರಾಜೀನಾಮೆ ಪ್ರಕರಣದ ವಿಚಾರಣೆ ಕೈಗೆತ್ತಿಕೊಳ್ಳುವ ನಿಲುವನ್ನು ಸ್ಪೀಕರ್ ತೆಗೆದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಶಾಸಕ ಸ್ಥಾನಕ್ಕೆ ಆನಂದ್‌ಸಿಂಗ್ ನೀಡಿರುವ ರಾಜೀನಾಮೆ ಅಂಗೀಕಾರ ವಿಳಂಬವಾಗುವುದು ನಿಚ್ಚಳವಾಗಿದೆ. ಮತ್ತೊಂದೆಡೆ ರೆಬೆಲ್ ಸ್ಟಾರ್ ರಮೇಶ್ ಜಾರಕಿಹೊಳಿ ರಾಜೀನಾಮೆಗೆ ತಾಂತ್ರಿಕ ತೊಡಕು ಎದುರಾಗಿದೆ.

ಆನಂದ್ ಸಿಂಗ್ ಹಾಗೂ ರಮೇಶ್ ಜಾರಕಿಹೊಳಿ ರಾಜೀನಾಮೆ ಪ್ರಕರಣ ಇತ್ಯರ್ಥ ಸಂಬಂಧ ಸ್ಪೀಕರ್ ಅವರು ಮಂಗಳವಾರ ವಿಧಾನಸಭೆ ಸಚಿವಾಲಯದ ಅಧಿಕಾರಿಗಳೊಂದಿಗೆ ಸುದೀರ್ಘ ಪರಾಮರ್ಶೆ ನಡೆಸಿದರು. ತಮ್ಮನ್ನು ಭೇಟಿಯಾಗಿದ್ದ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೂ ಸಮಾಲೋಚಿಸಿದರು. ಇದಾದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಸ್ಪೀಕರ್, "ಆನಂದ್ ಸಿಂಗ್ ರಾಜೀನಾಮೆ ನೀಡಿರುವುದರಿಂದ ವಿಚಾರಣೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು," ಎಂದರು. ಇದರೊಂದಿಗೆ ಶಾಸಕ ಸ್ಥಾನಕ್ಕೆ ತಾವು ನೀಡಿದ ರಾಜೀನಾಮೆ ಅಂಗೀಕಾರವಾಗಲು ಆನಂದ್ ಸಿಂಗ್ ಕಾಯುವುದು ಅನಿವಾರ್ಯವಾಗಲಿದೆ.

ಈ ಮಧ್ಯೆ ಮಂಗಳವಾರ ಅಮಾವಾಸ್ಯೆ ದಿನವಾದದ್ದರಿಂದ ಅತೃಪ್ತ ಶಾಸಕರು ಸ್ಪೀಕರ್ ಕಚೇರಿಯತ್ತ ಸುಳಿಯಲಿಲ್ಲ. ಬುಧವಾರ 4 ರಿಂದ 5 ಮಂದಿ ರಾಜೀನಾಮೆ ನೀಡಬಹುದು ಎಂದು ಹೇಳಲಾಗುತ್ತಿದೆ.

**ರಮೇಶ್-ಸ್ಪೀಕರ್ ಭೇಟಿ ಇಂದು**

ಕೈಬರಹದ ಪ್ರತಿಯನ್ನು ಫ್ಯಾಕ್ಸ್ ಮೂಲಕ ಸ್ಪೀಕರ್ ಕಚೇರಿಗೆ ರಮೇಶ್ ಜಾರಕಿಹೊಳಿ ರವಾನಿಸಿದ್ದರು. ಮಂಗಳವಾರ ಸ್ಪೀಕರ್‌ರನ್ನು ಭೇಟಿಯಾಗಿ ರಾಜೀನಾಮೆ ಪತ್ರ ಕೊಡಲು ಜಾರಕಿಹೊಳಿ ಬಯಸಿದ್ದರು. ಅಮಾವಾಸ್ಯೆ ಕಾರಣ ಭೇಟಿ ಮಾಡಲಿಲ್ಲ. ಬುಧವಾರ ಸ್ಪೀಕರ್ ಅವರನ್ನು ಭೇಟಿಯಾಗಲಿರುವ ಜಾರಕಿಹೊಳಿ ರಾಜೀನಾಮೆ ಪತ್ರ ನೀಡುವ ಸಾಧ್ಯತೆಯಿದೆ.

**ಜಾರಕಿಹೊಳಿ ವಿರುದ್ಧ ಸ್ಪೀಕರ್ ಗರಂ**

ಫ್ಯಾಕ್ಸ್ ಮೂಲಕ ರಮೇಶ್ ಜಾರಕಿಹೊಳಿ ರಾಜೀನಾಮೆ ನೀಡಿದ್ದನ್ನು ಗಮನಕ್ಕೆ ತಂದಾಗ ಗರಂ ಆದ ಸ್ಪೀಕರ್ ರಮೇಶ್ ಕುಮಾರ್, "ಫ್ಯಾಕ್ಸ್‌ನಿಂದ ರಾಜೀನಾಮೆ ತೆಗೆದುಕೊಳ್ಳಲು ನಾನು ಪೋಸ್ಟಲ್ ಡಿಪಾರ್ಟ್‌ಮೆಂಟ್‌ನಲ್ಲಿಲ್ಲ, ನಾನು ಸದನದ ಸ್ಪೀಕರ್ ಆಗಿದ್ದೇನೆ. ಮಾಧ್ಯಮಗಳ ಮುಂದೆ ಮಾತನಾಡುವಾಗ ಎಚ್ಚರಿಕೆಯಿರಲಿ. ಯಾರ ದೊಡ್ಡಸ್ತಿಕೆಯೂ ಇಲ್ಲಿ ನಡೆಯುವುದಿಲ್ಲ. ನಿಯಮಗಳಷ್ಟೇ ಇಲ್ಲಿ ಮುಖ್ಯ. ನಾನು ಸಂವಿಧಾನದ ಆಶಯಕ್ಕಷ್ಟೇ ನಾನು ತಲೆಬಾಗುತ್ತೇನೆ. ಇದು ಅಸೆಂಬ್ಲಿಗೆ ಸಂಬಂಧಿಸಿದ ವಿಚಾರವಾಗಿದ್ದು ನಾವು ದನಗಳ ರೀತಿ ನಡೆದುಕೊಳ್ಳಲು ಬರುವುದಿಲ್ಲ," ಎಂದು ಹೇಳಿದರು.

## ಏನಿದು ಜಾಧವ್ ಮಾದರಿ?

**ಲೋಕಸಭೆ ಚುನಾವಣೆಗೆ ಮುನ್ನ ವಿಧಾನಸಭೆ ಸದಸ್ಯತ್ವಕ್ಕೆ ಉಮೇಶ್ ಜಾಧವ್ ರಾಜೀನಾಮೆ ನೀಡಿದ್ದರು. ಖುದ್ದು ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಅವರನ್ನೇ ಭೇಟಿಯಾಗಿದ್ದ ಜಾಧವ್ ರಾಜೀನಾಮೆ ಪತ್ರ ಹಸ್ತಾಂತರಿಸಿದ್ದರು. ಈ ನಡುವೆಯೂ ಜಾಧವ್‌ರನ್ನು ಸ್ಪೀಕರ್ ವಿಚಾರಣೆಗೆ ಒಳಪಡಿಸಿದ್ದರು. ಜತೆಗೆ ಜಾಧವ್ ಆಯ್ಕೆಯಾಗಿದ್ದ ಚಿಂಚೋಳಿ ಕ್ಷೇತ್ರದ ಮತದಾರರ ಅಭಿಪ್ರಾಯವನ್ನೂ ಪಡೆದಿದ್ದರು. ಈ ಮೂಲಕ ಶಾಸಕರೊಬ್ಬರ ರಾಜೀನಾಮೆ ಅಂಗೀಕಾರ ಪ್ರಕ್ರಿಯೆಗೆ ಹಾಲಿ ವಿಧಾನಸಭಾಧ್ಯಕ್ಷರು ಹೊಸ ಮೇಲ್ಪಂಕ್ತಿ ಹಾಕಿಕೊಟ್ಟಿದ್ದರು.**

## ಸ್ಪೀಕರ್ ಸಾಹೇಬರು ಸಾತ್ವಿಕ ಸಿಟ್ಟಿಗೆದ್ದಾಗ...

**ಕೋಲಾರ:** "ಆನಂದ್ ಸಿಂಗ್ ಅವರ ರಾಜೀನಾಮೆ ಪತ್ರ ಬಂದಿದೆ. ನಿಯಮಾನುಸಾರ ಕ್ರಮ ಕೈಗೊಳ್ಳುತ್ತೇನೆ. ಉಳಿದಂತೆ ಯಾರೂ ನನ್ನ ಬಳಿ ಯಾರೂ ಬಂದಿಲ್ಲ," ಎಂದು ಸ್ಪೀಕರ್ ಕೆ.ಆರ್. ರಮೇಶ್‌ಕುಮಾರ್ ಹೇಳಿದರು. ಶಾಸಕರ ರಾಜೀನಾಮೆ ವಿಚಾರದ ಕುರಿತು ಮಂಗಳವಾರ ಪ್ರತಿಕ್ರಿಯಿಸಿ, "ರಾಜಕಾರಣ ಅಧಃಪತನಕ್ಕೆ ತಲುಪಿದೆ. ಸಾರ್ವಜನಿಕ ಜೀವನಕ್ಕೆ ಮೂರು ಕಾಸು ಮರ್ಯಾದೆ ಉಳಿದಿಲ್ಲ. ಇಂತಹ ಸಂದರ್ಭದಲ್ಲಿ ಗೌರವವಾಗಿ ಸಾಯೋದಕ್ಕೆ ಆಸೆ ಪಡುತ್ತಿರುವ ನಮ್ಮನ್ನು ಕೆಳಕ್ಕೆ ತಳ್ಳುವುದಕ್ಕೆ ಯಾಕೆ ಪ್ರಯತ್ನ ಮಾಡುತ್ತಿದ್ದೀರಿ. ಗೌರವವಾಗಿ ಸಾಯೋದಕ್ಕೆ ಆಸೆ ಪಡ್ತಾ ಇದ್ದೀವಿ ಅದಕ್ಕೂ ತೊಂದರೆ ಮಾಡುತ್ತೀರಲ್ಲ, ಕೇಳಿದ್ದನ್ನೇ ಹತ್ತು ಬಾರಿ ಯಾಕೆ ನೀವು ಕೇಳುತ್ತೀರಿ," ಎಂದು ಪತ್ರಕರ್ತರನ್ನೇ ಸಿಟ್ಟಿನಿಂದ ಪ್ರಶ್ನಿಸಿದರು.



**ಆನಂದ್ ಸಿಂಗ್ ಹೊರತು ಪಡಿಸಿ ಬೇರೆ ಯಾವ ಶಾಸಕರೂ ರಾಜೀನಾಮೆ ನೀಡಿಲ್ಲ, ಇಷ್ಟೇ ದಿನದಲ್ಲಿ ಶಾಸಕರ ರಾಜೀನಾಮೆ ಬಗ್ಗೆ ತೀರ್ಮಾನಿಸಬೇಕೆಂಬ ನಿಯಮವಿಲ್ಲ. ಜಾಧವ್ ರಾಜೀನಾಮೆ ಇತ್ಯರ್ಥಗೊಳಿಸಿದ ಮಾದರಿಯಲ್ಲಿ ಇದನ್ನೂ ಪರಿಗಣಿಸಿ ಕಾನೂನುಬದ್ಧವಾಗಿ ಬಗೆಹರಿಸಲಾಗುವುದು. ಸಿಂಗ್ ಅವರನ್ನು ಕರೆಸಿ ವಿಚಾರಣೆ ನಡೆಸಲಾಗುವುದು.**

**-ಕೆ.ಆರ್.ರಮೇಶ್ ಕುಮಾರ್** ಸ್ಪೀಕರ್